# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 133 (193)

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 10.12.2024

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಹಾಪ್ ಕಾಮ್ಸ್ ಒಟ್ಟು ಮಳಿಗೆಗಳ ಸಂಖ್ಯೆಯೆಷ್ಟು : ಈ ಮಳಿಗೆಗಳಲ್ಲಿ ಪ್ರಸ್ತುತ ಎಷ್ಟು ಹಾಪ್ ಕಾಮ್ಸ್ ವಹಿವಾಟು ನಡೆಸುತ್ತಿವೆ : ಎಷ್ಟು ಮಳಿಗೆಗಳನ್ನು ಬಂದ್ ಮಾಡಲಾಗಿದೆ : ಇದಕ್ಕೆ ಕಾರಣಗಳೇನು : | 1. ರಾಜ್ಯದಲ್ಲಿರುವ ಹಾಪ್‌ಕಾಮ್ಸ್ ಮಳಿಗೆಗಳ ಒಟ್ಟು ಸಂಖ್ಯೆ: 486.<br><br>2. ಪ್ರಸ್ತುತ ವಹಿವಾಟು ನಡೆಸುತ್ತಿರುವ ಮಳಿಗೆಗಳ ಸಂಖ್ಯೆ: 346.<br><br>3. ಬಂದ್ ಮಾಡಲಾಗಿರುವ ಮಳಿಗೆಗಳ ಸಂಖ್ಯೆ: 140.<br><br>ಇದಕ್ಕೆ ಕಾರಣಗಳು :<br><br>1. ಜನಸಂದಣಿ ಇರದೇ ಇರುವ ಕಾರಣ, ಹೆಚ್ಚು ವ್ಯಾಪಾರ ವಹಿವಾಟು ನಡೆಯದೇ ಇರುವ ಸ್ಥಳಗಳಲ್ಲಿ, ಖಾಸಗಿಯವರು ಹಣ್ಣು-ತರಕಾರಿ ಮಾರಾಟ ಮಾಡುತ್ತಿರುವುದರಿಂದ ಮಳಿಗೆಗಳನ್ನು ಮುಚ್ಚಲಾಗಿದೆ.<br><br>2. ಹಾಪ್ ಕಾಮ್ಸ್ ಬೆಂಗಳೂರಿನ ನೌಕರರು ಹೆಚ್ಚಿನ ಪ್ರಮಾಣದಲ್ಲಿ ನಿವೃತ್ತಿ ಹೊಂದಿರುತ್ತಾರೆ. ಇದರಿಂದಾಗಿ ನೌಕರರ ಕೊರತೆ ಉಂಟಾಗಿ ಮಳಿಗೆಗಳನ್ನು ಮುಚ್ಚಲಾಗಿರುತ್ತದೆ.<br><br>3. ಬೆಂಗಳೂರಿನ ಪ್ರತಿಷ್ಟಿತ ಮಾಲ್‌ಗಳು ಹಾಗೂ ಖಾಸಗಿ ವ್ಯಾಪಾರಸ್ಥರಿಂದ ತೀವ್ರ ವ್ಯಾಪಾರ ಪೈಪೋಟಿ ಉಂಟಾಗಿರುತ್ತದೆ. ಜೊತೆಗೆ, ಕೆಲವು ಪ್ರದೇಶಗಳಲ್ಲಿ ರಸ್ತೆಯ ಅಗಲೀಕರಣ, ಮೆಟ್ರೋ ನಿರ್ಮಾಣದಿಂದಾಗಿ ಮಳಿಗೆಗಳನ್ನು ಕೆಡವಲಾಗಿರುತ್ತದೆ. |

| | | |
|---|---|---|
| ಆ) | ಹಾಪ್ ಕಾಮ್ಸ್ ಮಳಿಗೆಯಲ್ಲಿ ಯಾವ ಯಾವ ಪದಾರ್ಥಗಳನ್ನು ಮಾರಾಟ ಮಾಡಬೇಕೆಂಬ ನಿಯಮ ಇದೆ : ಕೆಲವೊಂದು ಮಳಿಗೆಗಳಲ್ಲಿ ಖಾಸಗಿ ವ್ಯಕ್ತಿಗಳು ಹಣ್ಣುಗಳನ್ನು ಮಾರಾಟ ಮಾಡುತ್ತಿದ್ದು, ಹಾಪ್ ಕಾಮ್ಸ್ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : | 1. ಹಾಪ್‌ಕಾಮ್ಸ್ ಸಂಸ್ಥೆಗಳಲ್ಲಿ ಈ ಕೆಳ ಕಾಣಿಸಿದ ತೋಟಗಾರಿಕೆ ಉತ್ಪನ್ನಗಳು ಮತ್ತು ಇತರೆ ಪದಾರ್ಥಗಳನ್ನು ಮಾರಾಟ ಮಾಡಲು ಸಂಸ್ಥೆಯ ಬೈಲಾಗಳಲ್ಲಿ ಅವಕಾಶ ಕಲ್ಪಿಸಲಾಗಿದೆ:-<br>i. ಸದಸ್ಯ ರೈತರುಗಳು ಬೆಳೆದ ಕೃಷಿ/ತೋಟಗಾರಿಕೆ ಉತ್ಪನ್ನಗಳು.<br>ii. ಗೊಬ್ಬರಗಳು, ರಾಸಾಯನಿಕ ಗೊಬ್ಬರಗಳು, ತೋಟಗಾರಿಕೆ ಸಲಕರಣೆಗಳು, ಔಷಧಿಗಳು, ಬಿತ್ತನೆ ಬೀಜಗಳು, ಹಿಂಡಿಗಳು.<br>iii. ತಾಜಾ ಹಾಗೂ ಸಂಸ್ಕರಿಸಿದ ತೋಟದ ಉತ್ಪನ್ನಗಳು.<br>iv. ಹಣ್ಣುಗಳ ರಸ(ಜ್ಯೂಸ್), ಎಳನೀರು, ಕುಡಿಯುವ ನೀರು ಇತ್ಯಾದಿ.<br>v. ಕ್ಯಾಂಪ್ಕೋ ಸಂಸ್ಥೆಯ ವಿವಿಧ ಬಗೆಯ ಉತ್ಪನ್ನಗಳು.<br>vi. ಕೆ.ಒ.ಎಫ್. ಸಂಸ್ಥೆಯ ಅಡುಗೆ ಎಣ್ಣೆ ಇತ್ಯಾದಿ.<br>vii. ಸಿರಿ ಧಾನ್ಯಗಳು, ಉತ್ತರ ಕರ್ನಾಟಕದ ಪದಾರ್ಥಗಳು.<br>2. ಹಾಪ್‌ಕಾಮ್ಸ್ ಸಂಸ್ಥೆಯ ಮಳಿಗೆಗಳಲ್ಲಿ ಯಾವುದೇ ಖಾಸಗಿ ವ್ಯಕ್ತಿಗಳು ಹಣ್ಣುಗಳನ್ನು ಮಾರಾಟ ಮಾಡುತ್ತಿರುವುದಿಲ್ಲ. ಏಕೆಂದರೆ, ಸಂಸ್ಥೆಯ ಬಹುತೇಕ ಮಳಿಗೆಗಳನ್ನು ಸಂಸ್ಥೆಯ ನೌಕರರ ವತಿಯಿಂದಲೇ ನಿರ್ವಹಿಸಲಾಗುತ್ತಿದೆ. ಕೆಲವು ಮಳಿಗೆಗಳನ್ನು ಮಾತ್ರ ಸಂಸ್ಥೆಯ ಬೈಲಾಗಳನ್ವಯ ಖಾಸಗಿ ಸಂಸ್ಥೆಯ ವ್ಯಕ್ತಿಗಳಿಗೆ ಷರತ್ತುಗಳಿಗೆ ಒಳಪಟ್ಟು ಫ್ರಾಂಚೈಸಿ ಆಧಾರದ ಮೇಲೆ ನೀಡಲಾಗಿರುತ್ತದೆ.<br>3. ಸಂಸ್ಥೆಯ ಮಳಿಗೆಗಳಲ್ಲಿ ಆನ್ ಲೈನ್ ಬಿಲ್ಲಿಂಗ್‌ವ್ಯವಸ್ಥೆ ಜಾರಿಯಲ್ಲಿದ್ದು ಸಂಸ್ಥೆಯು ನಿಗಧಿಪಡಿಸಿದ ದರಗಳನ್ನು ತೂಕದ ಮಾಪನ ಯಂತ್ರ (ಸ್ಕೇಲ್) ಗಳಿಗೆ ಪ್ರತಿ ದಿನ ಆರೋಹಣೆ (upload) ಮಾಡಲಾಗುವುದು. ಸದರಿ ಫ್ರಾಂಚೈಸಿದಾರರು ಸಹ ಸಂಸ್ಥೆಯು ಪ್ರತಿ ದಿನ ನಿಗಧಿಪಡಿಸಿದ ದರಗಳಲ್ಲಿಯೇ ಹಣ್ಣುಗಳನ್ನು ಮಾರಾಟ ಮಾಡುತ್ತಾರೆ. ಹೀಗಾಗಿ ಹಣ್ಣುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಅವಕಾಶ ಇರುವುದಿಲ್ಲ. |

| | | |
|---|---|---|
| ಇ) | ಬೆಂಗಳೂರು ನಗರ ಭಾಗದ ಅನೇಕ ಕಡೆ ಹಾಪ್ ಕಾಮ್ಸ್ ಮಳಿಗೆಗಳಲ್ಲಿ ಅಕ್ಕಿ ಮೂಟೆ ಹಾಗೂ ಇನ್ನಿತರೆ ತೋಟಗಾರಿಕೆ ಬೆಳೆಗಳಲ್ಲದ ಸಾಮಾಗ್ರಿಗಳನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : | ಹೌದು.<br><br>ಹಾಪ್ ಕಾಮ್ಸ್ ಸಂಸ್ಥೆಯ ಲಾಭದಾಯಕತೆ ಹಿತದೃಷ್ಟಿಯಿಂದ ಕೃಷಿ ಉತ್ಪನ್ನಗಳಾದ ಅಕ್ಕಿ, ಸಿರಿಧಾನ್ಯ ಹಾಗೂ ಕರ್ನಾಟಕ ಆಯಿಲ್ ಫೆಡರೇಷನ್ ಸಂಸ್ಥೆಯು ಸರಬರಾಜು ಮಾಡುವ ಎಣ್ಣೆ ಇತ್ಯಾದಿ ಉತ್ಪನ್ನಗಳನ್ನು ಮಾರಾಟ ಮಾಡಲು ಸಂಸ್ಥೆಯ ಬೈಲಾಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. |
| ಈ) | ಆಗಿದ್ದಲ್ಲಿ ಇದುವರೆಗೂ ಎಷ್ಟು ಮಳಿಗೆಗಳನ್ನು ಪರಿಶೀಲಿಸಲಾಗಿದೆ. ಈ ಮಳಿಗೆಗಳ ಮೇಲೆ ತೆಗೆದುಕೊಂಡ ಕ್ರಮವೇನು :ಇದರಿಂದ ರೈತರಿಗೆ ಅನಾನುಕೂಲವಾಗುವುದಿಲ್ಲವೇ : | ಸಂಸ್ಥೆಯ ಬೈಲಾದಲ್ಲಿಯೇ ಅಂತಹ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸಿಕೋಡಿರುವುರಿಂದ ಮಳಿಗೆಯ ವಿಶೇಷ ಪರಿವೀಕ್ಷಣೆಯ ಅವಶ್ಯಕತೆ ಇರುವುದಿಲ್ಲ.<br><br>ಇದರಿಂದ ಸಂಸ್ಥೆಯ ಸದಸ್ಯ ರೈತರು ಬೆಳೆದ ತಾಜಾಹಣ್ಣು ತರಕಾರಿಗಳ ಮಾರಾಟಕ್ಕೆ ಸಹಾಯವಾಗುತ್ತದೆ. |
| ಉ) | ಸದರಿ ಮಳಿಗೆಗಳಲ್ಲಿ ಎಷ್ಟು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ : ಖಾಲಿ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು : | 1. ರಾಜ್ಯದಲ್ಲಿರುವ ಹಾಪ್ ಕಾಮ್ಸ್ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಒಟ್ಟು ಸಂಖ್ಯೆ: 525 .<br><br>2. ಖಾಲಿ ಇರುವ ಹುದ್ದೆಗಳ ಸಂಖ್ಯೆ: 284 . |

**HORTI 531 HGM 2024**

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಇಲಾಖೆ